# ಮೊಬೈಲ್ ಕುಲುಮೆ

**ಮಳೆಗಾಲದಲ್ಲಿ ವಲಸೆ ಬರುವ ಮಹಾರಾಷ್ಟ್ರದ ಕಮ್ಮಾರರಿಗೆ ಬೇಸಿಗೆ ಬರುವವರೆಗೂ ಕರ್ನಾಟಕದ ಊರುಕೇರಿಗಳೇ ನೆಲೆ. ಮನೆ ಬಾಗಿಲಿಗೆ ಬರುವ ಕುಲುಮೆಗಳು ಮೂಲೆ ಸೇರಿದ್ದ ಕಬ್ಬಿಣದ ಸಲಕರಣೆಗಳಿಗೆ ಹೊಳಪು ನೀಡುತ್ತವೆ. ಕಸುಬುದಾರ ಶ್ರಮಿಕರು ಮತ್ತು ಕನ್ನಡಿಗರ ನಡುವೆ ರೂಪುಗೊಂಡಿರುವ 'ಶ್ರಮ ಸಂಬಂಧ' ವಿಶಿಷ್ಟವಾದುದು.**

■ ಸ್ವರೂಪಾನಂದ ಎಂ. ಕೊಟ್ಟೂರು


ಕುಲುಮೆ ಕೆಲಸ ಹೆಣ್ಮಕ್ಕಳಿಗೇನೂ ಹೊರೆಯಲ್ಲ!

'ಕುರ್ಚಿಗೆ, ಕೊಡಲಿ, ಕುಡುಗೋಲು ಅಣಿಸಬೇಕಾಗಿತ್ತು. ಮಹಾರಾಷ್ಟ್ರದ ಮಂದಿ ಇನ್ನೂ ನಮ್ಮಳ್ಳಿಗೆ ಬಂದಿಲ್ಲ. ಅಲ್ಲಿ ಬಂದಾರೇನೋ?'

ವಿಜಯನಗರ ಜಿಲ್ಲೆ ಕೂಡ್ಲಿಗಿ ಸಮೀಪದ ಈಚಲಬೊಮ್ಮನಹಳ್ಳಿಯ ಸಂತೋಷ್ ಫೋನ್‌ನಲ್ಲಿ ಹೀಗೆ ವಿಚಾರಿಸಿದ್ದನ್ನು ನೋಡಿ ಆಶ್ಚರ್ಯವಾಯಿತು. ಕಬ್ಬಿಣದ ಕೃಷಿ ಸಲಕರಣೆಗಳನ್ನು ಹದ ಮಾಡಿಸಲಿಕ್ಕೂ ಮಹಾರಾಷ್ಟ್ರದ ಮಂದಿಗೂ ಏನು ಸಂಬಂಧ?

ಸಂತೋಷ್ ಹೇಳಿದ: 'ನಮ್ಮೂರಲ್ಲಿ ಕಮ್ಮಾರರು ಇಲ್ಲ. ಪೇಟೆಗೋ ಇಲ್ಲವೇ ಕಮ್ಮಾರರು ಇರುವ ಹಳ್ಳಿಗೆ ಹೋಗಬೇಕು. ಅಲ್ಲಿ ದಿನಗಟ್ಟಲೆ ಕಾಯಬೇಕು. ಅಷ್ಟಾದ ಮೇಲೂ ಅವರು ಕೇಳಿದಷ್ಟು ದುಡ್ಡು ಕೊಟ್ಟು ಬರಬೇಕು. ಹಾಗಾಗಿ ಮಹಾರಾಷ್ಟ್ರದಿಂದ ಬರುವ ಕಮ್ಮಾರರನ್ನು ಕಾಯುತ್ತೇವೆ. ಸಮಯ–ಹಣ ಎರಡೂ ಉಳಿತಾಯ. ಕೆಲಸವೂ ಪಕ್ಕಾ ಮತ್ತು ಫಟಾಫಟ್'.

## ಮಳೆಗಾಲಕ್ಕೆ ಬರ್ತಾರೆ!

ಪ್ರತಿ ವರ್ಷ ಮಳೆಗಾಲ ಬರುತ್ತಿದ್ದಂತೆ ಮಹಾರಾಷ್ಟ್ರದ 300–350 ಕಮ್ಮಾರಿಕೆ ಕುಟುಂಬಗಳು ಕರ್ನಾಟಕಕ್ಕೆ ವಲಸೆ ಬರುತ್ತವೆ. ಆಗ ರೈತರು ಸುಗ್ಗಿ ನಂತರ ಅಟ್ಟಕ್ಕೆ ಸೇರಿಸಿದ್ದ ಕೊಡಲಿ, ಕುರ್ಚಿಗೆ, ಕುಡಗೋಲು, ಕುಳ, ತಾಳಗಳನ್ನು ಹದ ಮಾಡಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ತಾವೇ ಕಬ್ಬಿಣ ಕೊಟ್ಟು ಉಪಕರಣಗಳನ್ನು ತಮಗೆ ಬೇಕಾದಂತೆ ಮಾಡಿಸಿಕೊಳ್ಳುತ್ತಾರೆ. ಇಲ್ಲವೇ ಸಿದ್ಧಪಡಿಸಿದ ಉಪಕರಣಗಳನ್ನು ಹಣ, ಕಾಳುಕಡಿ ಕೊಟ್ಟು ಖರೀದಿಸುತ್ತಾರೆ. ಮಹಾರಾಷ್ಟ್ರದಿಂದ ಮಾತ್ರವಲ್ಲ, ಮಧ್ಯಪ್ರದೇಶದಿಂದಲೂ ನೂರಾರು ಕಸುಬುದಾರರು ಕರ್ನಾಟಕಕ್ಕೆ ಬಂದು ನಗರ, ಪಟ್ಟಣ ಕೇಂದ್ರಗಳಲ್ಲಿ ಟೆಂಟ್ ಹಾಕಿ ನೆಲೆಸುತ್ತಾರೆ.

## ಮೊಬೈಲ್ ಸರ್ವೀಸ್

ಕಬ್ಬಿಣದ ಕೆಲಸ ಮಾಡುವ ಈ ಕಸುಬುದಾರರು ಒಂದೆಡೆ ಹೆಚ್ಚು ಕಾಲ ನೆಲೆಸುವುದಿಲ್ಲ. ತಮ್ಮ ಕೆಲಸಕ್ಕಾಗಿ ಅವರು ಸ್ವಂತದ್ದೊಂದು ಆಪೆ ಗೂಡ್ಸ್ ಆಟೊ ಮಾಡಿಕೊಂಡಿದ್ದಾರೆ. ಅದರಲ್ಲೇ ಸಾಮಾನು ಸರಂಜಾಮು ಹಾಕಿಕೊಂಡು ಕುಟುಂಬ ಸಮೇತ ಹಳ್ಳಿಗಳ ಮೇಲೆ ಅಲೆಯುತ್ತಾರೆ. ಪ್ರತಿ ವರ್ಷ ಭೇಟಿ ನೀಡುವ ಹಳ್ಳಿಗಳಿಗೆ ಸಂಪ್ರದಾಯದಂತೆ ಮೊದಲು ಭೇಟಿ ಕೊಟ್ಟು, ಅಲ್ಲಿ ಸಿಗುವ ಕೆಲಸದ ಆಧಾರದ ಮೇಲೆ ವಾಸ್ತವ್ಯ ಹೂಡಿ, ಕುಲುಮೆ ಹಾಕುತ್ತಾರೆ. ಕುಲುಮೆ ಮನೆ ಬಾಗಿಲಿಗೇ ಬಂದಾಕ್ಷಣ ಮೊಂಡಾಗಿ, ತುಕ್ಕು ಹಿಡಿದು ಮೂಲೆ ಸೇರಿದ್ದ ಚಾಕು, ಚೂರಿ, ಗುದ್ದಲಿ, ಪಿಕಾಸಿ ಸೇರಿದಂತೆ ಕಬ್ಬಿಣದ ಪರಿಕರಗಳೆಲ್ಲ ಹೊರಗೆ ಬಂದು ಹರಿತ ಮತ್ತು ಹೊಳಪು ಪಡೆದುಕೊಳ್ಳುತ್ತವೆ.

ಒಂದು ಹಳ್ಳಿಯಲ್ಲಿ ಕೆಲಸ ಮುಗಿದ ಮೇಲೆ ಈ ಕಸುಬುದಾರರು ವಿಳಂಬ ಮಾಡದೆ ಮುಂದಿನ ಹಳ್ಳಿಗೆ ಹೋಗುತ್ತಾರೆ. 'ಈ ಮೊದಲು ಕುದುರೆ




ಗಾಡಿಗಳಲ್ಲಿ ಬರುತ್ತಿದ್ದೆವು. ಆಗೆಲ್ಲ ಸಿಕ್ಕಾಪಟ್ಟೆ ಸಮಯ ಹಿಡಿದು ಎಲ್ಲ ಹಳ್ಳಿಗಳಿಗೆ ಹೋಗಲಿಕ್ಕೆ ಆಗುತ್ತಿರಲಿಲ್ಲ. ಕುದುರೆಗಳು ದಾರಿ ಮಧ್ಯೆ ಸಾವನ್ನಪ್ಪಿದಾಗ ತುಂಬಾ ಹೈರಾಣ ಆಗುತ್ತಿತ್ತು. ಈಗ ಗೂಡ್ಸ್ ಅಪ್ಪೆ ಗಾಡಿಯಲ್ಲಿ ತಿರುಗುತ್ತಿದ್ದೇವೆ' ಎಂದು ರಂಜಿತ್ ಸೋಲಂಕಿ ತಮ್ಮ ವೃತ್ತಿಯ ಕಥೆ ಹಂಚಿಕೊಂಡರು.

ನಮ್ಮಲ್ಲಿ ಅನೇಕ ಹಳ್ಳಿಗಳಲ್ಲಿ ಕಮ್ಮಾರರು ಇಲ್ಲ. ಇದ್ದರೂ ಕೃಷಿ ಸೀಜನ್‌ನಲ್ಲಿ ಅವರಿಗೆ